2. ಶ್ರೀ ಎಂ.ಜಿ. ತುಳಸೀದಾಸ್ ಹಿಂದಿನ ಪ್ರಭಾರೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಭೂದೃಶ್ಯ) ಲಾಲ್‌ಬಾಗ್ ಬೆಂಗಳೂರು ಹಾಲಿ ಸಹಾಯಕ ಭೂದೃಶ್ಯ ಅಧಿಕಾರಿ (ಭೂದೃಶ್ಯ) ಲಾಲ್‌ಬಾಗ್ ಬೆಂಗಳೂರು.
3. ಶ್ರೀ ಯೋಗೀಶ್ ಸಹಾಯಕ ಭೂದೃಶ್ಯ ಅಧಿಕಾರಿ (ಭೂದೃಶ್ಯ) ಲಾಲ್‌ಬಾಗ್ ಬೆಂಗಳೂರು.
4. ಶ್ರೀಮತಿ ಎಸ್.ಡಿ. ಲೀಲಾಬಾಯಿ ದ್ವಿತೀಯ ದರ್ಜೆ ಸಹಾಯಕರು (ಹಾಲೀ ಅಮಾನತ್ತು) ತೋಟಗಾರಿಕೆ ಇಲಾಖೆಯ ತೋಟಗಾರಿಕೆ ಜಂಟಿ ನಿರ್ದೇಶಕರು (ಜಾಗೃತ ದಳ)ರವರು ನಡೆಸಿದ ಪ್ರಾಥಮಿಕ ತನಿಖೆಯ ವರದಿಯ ಆಧಾರದ ಮೇಲೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಮೊಕ್ಕದ್ದಮೆ ಸಂ: 203/2002 ದಾಖಲಾಗಿದ್ದು ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ. ಹಾಗೂ ಆದೇಶ ಸಂ:ಕೃತೋಇ 255 ತೋಸೇಪ 02 ದಿನಾಂಕ: 21-5-03ರಲ್ಲಿ ಸದರಿ ಪ್ರಕರಣದ ತನಿಖೆ ನಡೆಸಲು ಲೋಕಾಯುಕ್ತ ರವರಿಗೆ ವಹಿಸಲಾಗಿದೆ.

ಇ) ಪೊಲೀಸ್ ತನಿಖಾ ವರದಿಯು ಇನ್ನೂ ಬಂದಿರುವುದಿಲ್ಲ.

ಈ) ಪೊಲೀಸ್ ತನಿಖೆಯು ವಿಚಾರಣಾ ಹಂತದಲ್ಲಿದ್ದು ಈ ಮಧ್ಯೆ ಶೀಘ್ರ ತನಿಖೆಗಾಗಿ ಹಾಗೂ ಆರೋಪಿಗಳನ್ನು ಬೆಳಕಿಗೆ ತರುವ ಸಲುವಾಗಿ ಸದರಿ ಪ್ರಕರಣವನ್ನು ಲೋಕಾಯುಕ್ತ ರವರಿಗೆ ವಹಿಸಲಾಗಿರುತ್ತದೆ.

ರಾಜ್ಯದ ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ

2392 (2858) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಡಿಕೆ, ತೆಂಗು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳೇನು; ಇವರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಅಡಿಕೆ ಬೆಳೆಗಾರರಿಗೆ ರಕ್ಷಣೆ ಕೊಡುವ ನಿಟ್ಟಿನಲ್ಲಿ ಶಾಸನ ಬದ್ಧ ಮಂಡಳಿ ರಚಿಸಲಾಗುವುದೇ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ರಾಜ್ಯದಲ್ಲಿ ಅಡಿಕೆ ಮತ್ತು ತೆಂಗು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಈ ಕೆಳಕಂಡಂತೆ ಇರುತ್ತವೆ.

1. ಬೆಲೆ ಕುಸಿತ
2. ಅಡಿಕೆ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಹಳದಿ ರೋಗ, ಕೊಳೆ ರೋಗಗಳ, ಬೇರು ಹುಳುವಿನ ಬಾಧೆ, ಹಾಗೂ ತೆಂಗಿಗೆ ನುಸಿ, ಕಪ್ಪುತಲೆ ಹುಳು, ಕೆಂಪುಮೂತಿ ಹುಳು, ರೈನೊಸರಸ್, ಕಾಂಡ ಸೋರುವಿಕೆ ಇತ್ಯಾದಿ ಕೀಟ ಹಾಗೂ ರೋಗಬಾಧೆ.
3. ಕಡಿಮೆ ಇಳುವರಿ
4. ನೀರಿನ ಕೊರತೆ
5. ಕೊಯಿಲಿನ ನಂತರದ ನಿರ್ವಹಣೆಗಾಗಿ (ಮಾರುಕಟ್ಟೆ/ಸಂಸ್ಕರಣೆ) ಮೂಲ ಸೌಕರ್ಯಗಳ ಕೊರತೆ.

ಅಡಿಕೆ ಮತ್ತು ತೆಂಗು ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮಗಳು ಈ ಕೆಳಕಂಡಂತೆ ಇರುತ್ತವೆ.

1. ತೆಂಗಿನ ಪ್ರದೇಶ ವಿಸ್ತರಣೆಗೆ ರೈತರಿಗೆ ಸಹಾಯಧನ ಒದಗಿಸಲಾಗುತ್ತಿದೆ.
2. ಉತ್ತಮ ತೆಂಗಿನ ಸಸಿಗಳನ್ನು ಉತ್ಪಾದಿಸಿ ಯೋಗ್ಯಬೆಲೆಯಲ್ಲಿ ರೈತರಿಗೆ ಒದಗಿಸಲಾಗುತ್ತಿದೆ.
3. ಮಾರುಕಟ್ಟೆಯಲ್ಲಿ ತೆಂಗಿನ ಮತ್ತು ಅಡಿಕೆಯು ಬೆಲೆ ಕುಸಿದಾಗ ರಾಜ್ಯಸರ್ಕಾರವು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಬೆಂಬಲಬೆಲೆ ಯೋಜನೆ ಜಾರಿಗೊಳಿಸುತ್ತಿದೆ.
4. ಈ ಬೆಳೆಗಳ ಆಧುನಿಕ ಬೇಸಾಯ ಕ್ರಮಗಳ ಬಗ್ಗೆ ರೈತರಿಗೆ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.
5. ರೈತರಿಗೆ ಜಿಲ್ಲಾ ಪಂಚಾಯತ್‌ಗಳ ಮೂಲಕ ಶೇ. 50ರ ರಿಯಾಯಿತಿ ದರದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಲಾಗುತ್ತಿದೆ.
6. ತೆಂಗಿನ ಮರಗಳ ಉತ್ಪಾದಕತೆ ಹೆಚ್ಚಿಸಲು ಬೇಕಾಗುವ ಪೋಷಕಾಂಶಗಳನ್ನು ಆಯ್ದ ಫಲಾನುಭವಿಗಳಿಗೆ ನೀಡಲಾಗುತ್ತಿದೆ.
7. ತೆಂಗಿನ ಮತ್ತು ಅಡಿಕೆ ತೋಟಗಳಿಂದ ಆದಾಯವನ್ನು ಹೆಚ್ಚಿಸಲು ವೆನಿಲ್ಲಾ ಕಾಳುಮೆಣಸು, ಕೋಕೋ ಇತ್ಯಾದಿ ಬೆಳೆಗಳನ್ನು ಅಂತರ ಬೆಳೆಗಾಗಿ ಬೆಳೆಯಲು ರೈತರಿಗೆ ಪ್ರೋತ್ಸಾಹಿಸಲಾಗಿರುತ್ತಿದೆ.
8. ಈ ಬೆಳೆಗಳನ್ನು ಬೆಳೆಸಲು ಸಾಲ ಸೌಲಭ್ಯವನ್ನು ಒದಗಿಸಲು ನೆರವು ನೀಡಲಾಗುತ್ತಿದೆ.
9. ತೋಟಗಳ ತ್ಯಾಜ್ಯ ವಸ್ತುಗಳಿಂದ ಸಾವಯವ ಗೊಬ್ಬರ ಹಾಗೂ ಎರೆಹುಳು ಗೊಬ್ಬರಗಳನ್ನಾಗಿ ಪರಿವರ್ತಿಸಲು ಪ್ರೋತ್ಸಾಹಿಸಲಾಗುತ್ತಿದೆ.
10. ತೆಂಗಿನ ಉತ್ಪನ್ನಗಳ ಸಮರ್ಥ ಬಳಕೆಗಾಗಿ ಪ್ರಾತ್ಯಕ್ಷಿತೆ ಮತ್ತು ತರಬೇತಿ ಕೇಂದ್ರವನ್ನು ಸ್ಥಾಪಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
11. ತೆಂಗಿನ ಕಪ್ಪುತಲೆ ಹುಳುವಿನ ನಿಯಂತ್ರಣೆಗಾಗಿ ವಿವಿಧ ಪರೋಪ ಜೀವಿಗಳನ್ನು ಇಲಾಖೆಯ ಪ್ರಯೋಗ ಶಾಲೆಗಳಲ್ಲಿ ಉತ್ಪಾದಿಸಿ ರೈತರ ತೋಟಗಳಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.
12. ತೆಂಗಿನ ನುಸಿ ನಿರ್ವಹಣೆಗಾಗಿ ತೆಂಗಿನ ಮರಗಳ ಆರೋಗ್ಯ ಮಟ್ಟವನ್ನು ಅಭಿವೃದ್ಧಿಪಡಿಸಲು ಬ್ಲಾಕ್ ಪ್ರಾತ್ಯಕ್ಷತೆ ಕೈಗೊಳ್ಳುವ ಮೂಲಕ ಪೋಷಕಾಂಶಗಳ ಸೌಲಭ್ಯಗಳನ್ನು ಆಯ್ದ ರೈತರಿಗೆ ಒದಗಿಸಲಾಗುತ್ತಿದೆ.
13. ತೆಂಗಿನ ನೀರಾ ಸಂಸ್ಕರಣೆ ಮತ್ತು ಬಳಕೆ ಕುರಿತಂತೆ ಸಂಶೋಧನೆ ಕೈಗೊಳ್ಳಲು CFTRI/ DFRL ಹಣಕಾಸಿನ ನೆರವು ಒದಗಿಸಲಾಗಿದೆ.

ಆ) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ನುಸಿ ಪೀಡೆ ನಿಯಂತ್ರಣಕ್ಕೆ ನೀಡಿದ ಔಷಧಿ ವಿತರಣೆಯಲ್ಲಿ ಆಗಿರುವ ಅಕ್ರಮಗಳ ಬಗ್ಗೆ

2393 (2859) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?